# ರಾಜ್ಯದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ
# "ಖಾತ್ರಿ ಬೆಲೆ, ಸದೃಢ ಮಾರುಕಟ್ಟೆ"
## 2014-15 ನೇ ಸಾಲಿನ ಉತ್ಪಾದನಾ ವೆಚ್ಚ ಮತ್ತು ವಾಸ್ತವ ಸ್ಥಿತಿ ವರದಿ

## – ಡಿಸೆಂಬರ್ 2015

### ಬಹು-ಮುಖಿ ಶಿಫಾರಸ್ಸುಗಳು

1. **ಕೃಷಿ ಉತ್ಪನ್ನಗಳಿಗೆ ಖಾತ್ರಿಯಾದ ಬೆಲೆ:**

- ಕೇಂದ್ರದ ಕನಿಷ್ಠ ಬೆಂಬಲ ಬೆಲೆ (MSP) ಅಥವಾ ಕೃಷಿ ಬೆಲೆ ಆಯೋಗ ಲೆಕ್ಕಾಚಾರದ ಪ್ರಕಾರ ಕುಟುಂಬದ ಶ್ರಮವೂ ಸೇರಿ ಉತ್ಪಾದನೆಗೆ **ರೈತ ಭರಿಸುವ ವೆಚ್ಚ** ($A_1$+FL) ಇವೆರಡರಲ್ಲಿ ಅಧಿಕವಾಗಿರುವುದನ್ನು ರಾಜ್ಯದ **ಅಧಿಕೃತ ಕನಿಷ್ಠ ವ್ಯವಹಾರಿಕ ಬೆಲೆ** *(Statutory Minimum Transaction Price - SMTP)* ಎಂದು ಪರಿಗಣಿಸುವುದು.

- **ನಿಯಂತ್ರಿತ ಮಾರುಕಟ್ಟೆ ವ್ಯವಸ್ಥೆ (ಎ.ಪಿ.ಎಂ.ಸಿ.) ಸೇರಿದಂತೆ ಅಧಿಕೃತವಾಗಿ ನಡೆಯುವ ಯಾವುದೇ ಮಾರಾಟ ಈ ಬೆಲೆ (SMTP) ಗಿಂತ ಕೆಳ ಮಟ್ಟದಲ್ಲಿ ನಡೆಯದಂತೆ ಕಾನೂನು ರೂಪಿಸುವುದು.**

- ರಾಜ್ಯದಲ್ಲಿ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ನಿಯಂತ್ರಿತ ಮಾರುಕಟ್ಟೆ ವ್ಯಾಪ್ತಿಯಿಂದ ಹೊರಗೆ ಅನಧಿಕೃತ ಮಾರಾಟಕ್ಕೆ ಸಂಪೂರ್ಣ ಕಡಿವಾಣ ಹಾಕುವುದು.

- ಸರ್ಕಾರದ ಅನ್ನಭಾಗ್ಯ ಯೋಜನೆಗೆ ಖರೀದಿಸುವಾಗ, ಸಫಲ್, ಮೆಟ್ರೋ, ರಿಲೆಯನ್ಸ್, ಇತ್ಯಾದಿ ಬೃಹತ್ ಸಂಘಟಿತ ಖಾಸಗಿ ಸಂಸ್ಥೆಗಳ ಒಪ್ಪಂದ ಖರೀದಿಗಳಲ್ಲಿ ಮತ್ತು **ಹಾಪ್‌ಕಾಮ್, ರೈತ ಉತ್ಪಾದಕರ ಸಂಘಟನೆ** (FPO) ಗಳಲ್ಲಿ ರೈತರಿಗೆ ಸಿಗುವ ಧಾರಣೆ ಒಟ್ಟು ಉತ್ಪಾನಾ ವೆಚ್ಚ **(Cost $C_3$)** ಕ್ಕಿಂತ ಕೆಳಗೆ ***ಬರದಂತೆ*** ನಿಗಾವಹಿಸುವುದು.

- ಅನ್ನಭಾಗ್ಯ ಯೋಜನೆಯಡಿ ವಿತರಣೆಯನ್ನು ವಿಸ್ತರಿಸಿ ತೊಗರಿ, ಈರುಳ್ಳಿ, ಕುಸುಬಲಕ್ಕಿ ಮುಂತಾದವುಗಳನ್ನು ಸೇರಿಸುವುದು.

- **ಧಾರಣೆ ಕುಸಿದಾಗ ರೈತರಿಗಾಗುವ ನಷ್ಟವನ್ನು ಭರಿಸಲು ಬೆಲೆ ವ್ಯತ್ಯಾಸ ಪರಿಹಾರ *(Price Compensation)* ಅಥವಾ ಕೊರತೆ ಪಾವತಿ *(Deficiency Payment)* ಯಂತಹ ವಿನೂತನ ಪದ್ಧತಿಗಳು ಜಾರಿಯಾಗಬೇಕು.**

2. **ಬೆಲೆ ಸ್ಥಿರೀಕರಣಕ್ಕೆ ಆವರ್ತನಿಧಿ:**

- ರಾಜ್ಯ ಸರ್ಕಾರ ಕನಿಷ್ಠ 5000 ಕೋಟಿ ರೂ. ಬೆಲೆ ಸ್ಥಿರೀಕರಣಕ್ಕಾಗಿ ಆವರ್ತನಿಧಿ *(Price Stabilization Revolving Fund)* ಯನ್ನು ಸ್ಥಾಪಿಸುವುದು.

- ಇದರ ಸಮರ್ಥ ಮತ್ತು ಪಾರದರ್ಶಕ ನಿರ್ವಹಣೆಗಾಗಿ ಒಂದು **ಪ್ರತ್ಯೇಕ ಸಚಿವಾಲಯ** *(Secretariate)* ವನ್ನು ರಚಿಸುವುದು.

3. **ಸಕಾಲದಲ್ಲಿ ಖರೀದಿ, ಶೀಘ್ರ ಪಾವತಿ:**

- ಗುಣಮಟ್ಟದ ಉತ್ಪನ್ನ (FAQ) ಸಿದ್ಧಪಡಿಸಲು ಇರುವ ಅಡಚಣೆ ನಿವಾರಿಸಲು ಗ್ರಾಮೀಣ ಯುವಕರಿಗೆ ತರಬೇತಿ ನೀಡಿ ಖರೀದಿಗೆ ತರುವ ಮೊದಲು ಪೂರ್ವಾಭಾವಿಯಾಗಿ ರೈತರ ಮಟ್ಟದಲ್ಲೇ ಉತ್ಪನ್ನದ ಗುಣಮಟ್ಟದ ದೃಢೀಕರಣವಾಗಬೇಕು.

- **ಸಾಗಾಣಿಕೆ ವ್ಯವಸ್ಥೆಯನ್ನು ಸರ್ಕಾರವೇ ಭರಿಸಿ, ಖರೀದಿಗೆ ಉತ್ಪನ್ನಗಳನ್ನು ತರಲು ಉತ್ತಮ ಚೀಲಗಳನ್ನು ಸರ್ಕಾರ ರಿಯಾಯ್ತಿ ದರದಲ್ಲಿ ರೈತರಿಗೆ ಸರಬರಾಜು ಮಾಡಿ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳ ಮೂಲಕ ಖರೀದಿ ಕೈಗೊಳ್ಳುವುದು.**

4. **ಉತ್ಪಾದನಾ ವೆಚ್ಚ ಇಳಿಸುವುದು:**

- ವಿಶ್ವವಿದ್ಯಾನಿಲಯ ಮತ್ತು ಸಂಶೋಧನಾ ಸಂಸ್ಥೆಗಳು ಕಡಿಮೆ ವೆಚ್ಚದ, ಸುಸ್ಥಿರ ಕೃಷಿ ತಂತ್ರಜ್ಞಾನಗಳನ್ನು ಸೃಷ್ಟಿಸಿ ನಮ್ಮ ರೈತರಿಗೆ ಒದಗಿಸುವತ್ತ ಹೆಚ್ಚು ಗಮನ ಹರಿಸಬೇಕು.

- **ಕೃಷಿ ಯಂತ್ರಗಳನ್ನು ಹೊಂದಿರುವ ರೈತರನ್ನು ಪಟ್ಟಿ ಮಾಡಿ ಯಂತ್ರದ ಸೇವೆಯನ್ನು ಇತರೆ ರೈತರಿಗೆ ಸಿಗುವಂತೆ ಮಾಡಲು ಖಾಸಗಿ ಕಾರುಗಳ 'ಓಲಾ'ದಂತೆ ಅಂತರ್ಜಾಲದ ಮೂಲಕ ವಿಸ್ತೃತ ಜಾಲ *(Online Aggregation)* ವ್ಯವಸ್ಥೆ ಏರ್ಪಡಿಸಬೇಕು.**

- ಮಣ್ಣು ಮತ್ತು ನೀರು ಸಂರಕ್ಷಣೆ ಮಾಡಿ, ಭೂ ಅಭಿವೃದ್ಧಿ ಕಾರ್ಯ ಇತ್ಯಾದಿಗಳ ಮೂಲಕ **ಉದ್ಯೋಗ ಖಾತ್ರಿ ಯೋಜನೆ** (MGNREGA) ಯ ಫಲಾನುಭವದ ಪ್ರಯೋಜನ ರೈತರಿಗೆ ದೊರಕುವಂತೆ ಮಾಡಬೇಕು.

5. **ಸಾಮೂಹಿಕ ಚೌಕಾಸಿ ಸಾಮರ್ಥ್ಯ ಹೆಚ್ಚಿಸುವುದು:**

- ರೈತರು ಒಗ್ಗೂಡಿ ಸಾಂಘಿಕವಾಗಿ ಸಂಸ್ಕರಣೆ, ಮೌಲ್ಯವರ್ಧನೆ, ಮಾರಾಟ ಕೈಗೊಂಡು ಗ್ರಾಹಕರು ನೀಡುವ ಬೆಲೆಯಲ್ಲಿ ಅಧಿಕ ಮತ್ತು ನ್ಯಾಯಯುತ ಪಾಲನ್ನು ಪಡೆಯುವಂತಾಗಲು ಕರ್ನಾಟಕ ಇಂದು **ಮಾರುಕಟ್ಟೆ ಕಾರ್ಯದಲ್ಲಿ ಒಂದು ಕ್ರಾಂತಿಯನ್ನೇ** ಸಾಧಿಸಬೇಕಾಗಿದೆ.

- ರಾಜ್ಯದ ವಿವಿಧ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳು ತಮ್ಮ ವ್ಯಾಪ್ತಿಯಲ್ಲಿ ಬರುವ **ಕೃಷಿ ವಿಜ್ಞಾನ ಕೇಂದ್ರ** (KVK) ಗಳ ಮೂಲಕ, ಪ್ರಮುಖ ಬೆಳೆಗಳ ಮೇಲೆ ಮಾದರಿ **ರೈತ ಉತ್ಪಾದಕ ಸಂಘ** (FPO) ವನ್ನು ರಚಿಸಬೇಕು.

- ಅದೇ ರೀತಿ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳು, ಮಾರ್ಕ್‌ಫೆಡ್ ಹಾಗೂ ತೋಟಗಾರಿಕೆ ಮಹಾಮಂಡಳಿಗಳು ಸೇರಿ ರೈತ ಸಂಘಟನೆಗಳು, ಸ್ವಯಂ ಸೇವಾ ಸಂಸ್ಥೆಗಳು, ಇತರರ ಸಹಯೋಗದಲ್ಲಿ ರಾಜ್ಯದಾದ್ಯಂತ ವಿವಿಧ ಬೆಳೆಗಳ ರೈತ ಉತ್ಪಾದಕ ಸಂಘಗಳನ್ನು ರಚಿಸುವುದು.

- ರೈತ ಉತ್ಪಾದಕ ಸಂಘಗಳ ಬೆಳೆಗಳಿಗೆ **ಗುಂಪು ಬೆಳೆ ವಿಮಾ ಯೋಜನೆ** ಅಳವಡಿಸುವುದು.

- **ಉತ್ಪಾದನೆ ಅಧಿಕವಾಗಿ ಆವಕ ಹೆಚ್ಚಾದಾಗ ತಕ್ಷಣ ಮಾರುಕಟ್ಟೆ ಮಧ್ಯಪ್ರವೇಶ ಮಾಡಿ ಖರೀದಿಸುವ ಜವಾಬ್ದಾರಿಯನ್ನು ಮಾರ್ಕ್‌ಫೆಡ್ ಮತ್ತು ತೋಟಗಾರಿಕೆ ಮಹಾಮಂಡಳಿಗಳು ಹೊರತಕ್ಕದ್ದು.**

- ಗುಣಮಟ್ಟದ ಉತ್ಪನ್ನಗಳನ್ನು ಒಗ್ಗೂಡಿಸಿ *(Aggregation)* ರೈತ ಉತ್ಪಾದಕರ ಸಂಘ ಮತ್ತು ಗ್ರಾಹಕರ ನಡುವೆ ನೇರ ಸಂಪರ್ಕ ಏರ್ಪಡಿಸಲು ಮಾಹಿತಿ ತಂತ್ರಜ್ಞಾನದಲ್ಲಿ ಪರಿಣಿತಿ ಹೊಂದಿರುವ **'ಆರಂಭೋತ್ಸಾಹಿ ಉದ್ದಿಮೆದಾರ'** *(Start Up Entrepreneurs)* ರನ್ನು ತೊಡಗಿಸಿಕೊಳ್ಳುವುದು.

6. **ಮಾರುಕಟ್ಟೆ ಇಲಾಖೆ ಸದೃಢೀಕರಣ:**

- ತಾಲ್ಲೂಕು ಮಟ್ಟದಲ್ಲಿ ಈಗ ಅಗತ್ಯವಾಗಿ ಬೇಕಾಗಿರುವುದು ರೈತ ಪರವಾದ ಸಮರ್ಥ **ಕೃಷಿ ಉತ್ಪನ್ನ ಮಾರಾಟ ಕೇಂದ್ರ**ಗಳು. ಸುಧಾರಣೆ ಹೆಸರಿನಲ್ಲಿ ಈಗಿರುವ ವ್ಯವಸ್ಥೆಯನ್ನು ದುರ್ಬಲಗೊಳಿಸಬಾರದು.

- **ಇ-ವ್ಯಾಪಾರದ ಸಾಧಕ-ಬಾಧಕಗಳನ್ನು ತಿಳಿಹೇಳಿ, ಗುಣಮಟ್ಟದ, ವರ್ಗೀಕರಣಗೊಂಡ *(Grading & Standardized)* ಉತ್ಪನ್ನಗಳನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ರೈತರಿಗೆ ಪ್ರೋತ್ಸಾಹ, ತರಬೇತಿ, ಸಾಮರ್ಥ್ಯ ಹೆಚ್ಚಳ ಇಂದು ಅತ್ಯಗತ್ಯವಾಗಿದೆ.**

- ರೂಢಿಯಲ್ಲಿರುವ ಮಧ್ಯವರ್ತಿಗಳ ಚಟುವಟಿಕೆಯನ್ನು ನಿಯಂತ್ರಿಸಿ, ಸಮರ್ಥ ಮತ್ತು ಸ್ಪರ್ಧಾತ್ಮಕ ರೀತಿಯಲ್ಲಿ ಇ-ಮಾರಾಟ ವ್ಯವಸ್ಥೆಯೊಳಗೆ ತೊಡಗಿಸಿಕೊಳ್ಳುವುದು.

- **ನಿಯಂತ್ರಿತ ಮಾರುಕಟ್ಟೆ** *(Regulated Market)* ವ್ಯಾಖ್ಯೆಯನ್ನು ವಿಸ್ತಾರಗೊಳಿಸಿ, ಇದರ ವ್ಯಾಪ್ತಿಯನ್ನು ಗ್ರಾಮಮಟ್ಟದವರೆಗೂ ಕೊಂಡೊಯ್ಯುವುದು.

- **ರೈತರು ಅಡಮಾನ್ ಸಾಲ *(Pledge Loan)* ವನ್ನು ಸಮರ್ಪಕವಾಗಿ ಬಳಸದಿರುವ ಬಗ್ಗೆ ಹಾಗೆಯೇ ನಿಯಂತ್ರಿತ ಮಾರುಕಟ್ಟೆ (ಎ.ಪಿ.ಎಂ.ಸಿ.) ಯಲ್ಲಿ ಅನಧಿಕೃತವಾಗಿ ರೈತರಿಂದ ಕರ ವಸೂಲಾತಿ ಮಾಡುತ್ತಿರುವ ಬಗ್ಗೆ ಸಮಗ್ರ ತನಿಖೆಯಾಗಿ ಸ್ಪಷ್ಟ ಪರಿಹಾರ ಒದಗಿಸತಕ್ಕದ್ದು.**

7. **ಮಾರಾಟ ಮಾಹಿತಿ ಪೂರೈಕೆ:**

- ರೈತರೊಡನೆ ನಿರಂತರ ಸಂಪರ್ಕ, ಸಂವಾದಕ್ಕಾಗಿ ಮಾರಾಟ ಇಲಾಖೆ ಕೃಷಿ, ತೋಟಗಾರಿಕೆ, ರೇಷ್ಮೆ ಮತ್ತಿತರ ಇಲಾಖೆಗಳನ್ನು ಸೇರಿಸಿ **ವಿದ್ಯುನ್ಮಾನ ಪೋರ್ಟಲ್** *(Portal)* ಪ್ರಾರಂಭಿಸುವುದು.

- ಹಾಗೇ ಗ್ರಾಮ ಮಟ್ಟದಲ್ಲಿ ಕೃಷಿ ಬೆಲೆ, ಮಾರಾಟ ಇತ್ಯಾದಿ **ಮಾಹಿತಿಗಳನ್ನು ಬಿತ್ತರಿಸುವ** (KIOSKS) ವ್ಯವಸ್ಥೆ ಏರ್ಪಡಿಸುವುದು ಮತ್ತು ಒಂದು ಸದೃಢ ತಾಂತ್ರಿಕ ಘಟಕ ಸ್ಥಾಪಿಸುವುದು.

8. **ಕೇಂದ್ರದ ಮೇಲೆ ಸಮರ್ಥ ಒತ್ತಡ:**

- ಕೇಂದ್ರ ಸರ್ಕಾರ ಎಂ. ಎಸ್. ಸ್ವಾಮಿನಾಥನ್ ಶಿಫಾರಸ್ಸಿನ ಬಗ್ಗೆ ತನ್ನ ನಿಲುವನ್ನು ಸ್ಪಷ್ಟಗೊಳಿಸಬೇಕು. **ರೈತರಿಗೆ ಲಾಭದಾಯಕ ಬೆಲೆಯ ಹಕ್ಕಿನ** *(Right to Remuneration Price)* ಕಾಯಿದೆ ಜಾರಿಗೆ ತರಬೇಕು.

- ತೋಟಗಾರಿಕೆ ಬೆಳೆಗಳಿಗೂ **ಕನಿಷ್ಠ ಬೆಂಬಲ ಬೆಲೆ** (MSP) ಘೋಷಿಸಿ ಖರೀದಿಸಬೇಕು.

- **ಕೇಂದ್ರದ ಕೃಷಿ ವೆಚ್ಚ ಮತ್ತು ಬೆಲೆ ಆಯೋಗ (ಸಿ.ಎ.ಸಿ.ಪಿ.) ಕ್ಕೆ ಶಾಸನಬದ್ಧ ಅಧಿಕಾರ ನೀಡಿ ಸದೃಢಗೊಳಿಸಿ ರೈತರ ಆದಾಯದ ಬಗ್ಗೆಯೂ ಗಮನಹರಿಸುವಂತೆ ಮಾರ್ಪಡಿಸಬೇಕು.**

- **'ಏಕೀಕೃತ ಮಾರುಕಟ್ಟೆ'** *(Unified Market)* ವ್ಯವಸ್ಥೆ ಜಾರಿಗೆ ಬಂದರೆ ಕೃಷಿ ಉತ್ಪನ್ನಗಳ ಮಾರಾಟ ಕೆಲ ಬೃಹತ್ ಖರೀದಿದಾರರ ಕೈಯಲ್ಲಿ ಕೇಂದ್ರೀಕೃತವಾಗದಂತೆ ನಿಗಾವಹಿಸಿ, ರೈತರ ಹಿತಕ್ಕೆ ಧಕ್ಕೆ ಬರದಂತೆ ಮಾಡಲು ರಾಜ್ಯ ಸರ್ಕಾರಗಳೊಡನೆ ಚರ್ಚೆ ಅತ್ಯಗತ್ಯ.

- ಕೃಷಿ ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಬರುವ ವಿಚಾರವಾಗಿದ್ದು, ರೈತರ ಹಿತಾಸಕ್ತಿಯನ್ನು ಪರಿಗಣಿಸಿ ಪ್ರೋತ್ಸಾಹದರದಂತಹ ವಿಚಾರಗಳ ಬಗ್ಗೆ ಕೇಂದ್ರದ ಬಿಗಿ ನಿಲುವುಗಳನ್ನು ಪುನರ್ ಪರಿಶೀಲಿಸಬೇಕು.

## ೯. ಪೂರಕ ಶಿಫಾರಸ್ಸುಗಳು:

ಅ) **ಉತ್ಪಾದನೆ ವೆಚ್ಚ ಲೆಕ್ಕಾಚಾರ ಮತ್ತು ಮಾರುಕಟ್ಟೆ ಮಾಹಿತಿ ವಿಶ್ಲೇಷಣೆ**ಗೆ ವಿವಿಧ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ, ಕೃಷಿ, ತೋಟಗಾರಿಕೆ ಮತ್ತು ಮಾರುಕಟ್ಟೆ ಇಲಾಖೆಗಳ ಸಕ್ರಿಯ ಸಹಯೋಗದಿಂದ **ಶಾಶ್ವತ ವ್ಯವಸ್ಥೆ** ರೂಪಿಸುವುದು.

- ಬೆಳೆ ಹಾನಿ ಇತ್ಯಾದಿ ವಿಚಾರಗಳಲ್ಲಿ ಪರಿಹಾರ ನಿರ್ಧರಿಸಲು ಕೃಷಿ ಬೆಲೆ ಆಯೋಗ ರೂಪಿಸಿರುವ ಕಾರ್ಯಪದ್ಧತಿ ಮತ್ತು ವೆಚ್ಚದ ಬಾಬ್ತುಗಳನ್ನು ಅಧಿಕೃತ ಎಂದು ಪರಿಗಣಿಸುವುದು.

ಆ) **ಸೂಕ್ತ ಬೆಳೆ ಯೋಜನೆ ಅನುಷ್ಠಾನ:** ಪ್ರತಿ ಜಿಲ್ಲೆಯಲ್ಲೂ **ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ** (CEO) ನೇತೃತ್ವದಲ್ಲಿ ರೈತರು, ತಜ್ಞರು, ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಮತ್ತಿತರನ್ನೊಳಗೊಂಡ ಸಮಿತಿ ರಚನೆಯಾಗಬೇಕು.

- ಪ್ರೋತ್ಸಾಹಿಸುವ ಉದ್ದೇಶದಿಂದ **ಪ್ರತಿ ಜಿಲ್ಲೆಯ ಪ್ರಮುಖ ಬೆಳೆ** ಅಥವಾ ಬೆಳೆ ಪದ್ಧತಿಗಳನ್ನು ಗುರುತಿಸುವುದು.

- ಜಿಲ್ಲಾ ಮಟ್ಟದ ಬೆಳೆ ಯೋಜನೆಯ ಆಧಾರದ ಮೇಲೆ **ಕೃಷಿ ಪರಿಸರ ವಲಯ** *(Agro Ecological Zones)* ಮಟ್ಟದ ಬೆಳೆ ಪದ್ಧತಿ ರೂಪಿಸಿ, ರಾಜ್ಯ ಮಟ್ಟದ ಸೂಕ್ತ ಬೆಳೆ ಮತ್ತು ಉತ್ಪಾದನೆ ಯೋಜನೆಯನ್ನು ರಚಿಸುವುದು.

- **ಸರ್ಕಾರದ ಹಿಡಿತದಲ್ಲಿರುವ ಪ್ರೋತ್ಸಾಹ, ರಿಯಾಯ್ತಿ, ಖರೀದಿ ಇತ್ಯಾದಿ ಕಾರ್ಯಕ್ರಮಗಳೆಲ್ಲವನ್ನೂ ಈ ಬೆಳೆ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಸೂಕ್ತ ಮತ್ತು ಸಮಯೋಚಿತ ರೀತಿಯಲ್ಲಿ ಬಳಸುವುದು.**

ಇ) **ಬೆಳೆ ವಿಮೆ:** ಸದ್ಯದ ಬೆಳೆ ವಿಮೆ ಪದ್ಧತಿಯನ್ನು ಸದೃಢಗೊಳಿಸಿ, **ಕೃಷಿ ಆದಾಯ ವಿಮೆ, ಗುಂಪು ಬೆಳೆ ವಿಮಾ ಯೋಜನೆ**ಗಳಂತಹ ನವೀನ ಬೆಳೆವಿಮೆ ಯೋಜನೆಗಳನ್ನು ಜಾರಿಗೆ ತಂದು ರೈತರಿಗೆ ಹಲವು ರೀತಿಯ ವಿಮಾ ಅವಕಾಶ ಕೊಡುವುದು.

ಈ) ವಿವಿಧ ಬೆಳೆಗಳ **ಬೀಜದ ಉತ್ಪಾದನೆ ವೆಚ್ಚವನ್ನು** ವೈಜ್ಞಾನಿಕವಾಗಿ ಲೆಕ್ಕಾಚಾರ ಹಾಕಿ ರೈತರಿಗೆ ಲಾಭದಾಯಕ ಬೆಲೆ ದೊರಕಿಸುವ ನಿಟ್ಟಿನಲ್ಲಿ **ಕರ್ನಾಟಕ ರಾಜ್ಯ ಬೀಜ ನಿಗಮ** ಕ್ರಮ ಕೈಗೊಳ್ಳುವುದು.

**ಉ) ಕೃಷಿ ಬೆಲೆ ಆಯೋಗ ಸದೃಢಗೊಳಿಸುವುದು: ಆಯೋಗಕ್ಕೆ ವಹಿಸಿರುವ ವಿವಿಧ ಕರ್ತವ್ಯಗಳನ್ನು ಯಶಸ್ವಿಯಾಗಿ ಪೂರೈಸಲು ಬೆಲೆ ಆಯೋಗಕ್ಕೆ ಶಾಸನಬದ್ಧ ಅಧಿಕಾರವನ್ನು ನೀಡಿ ಸದೃಢಗೊಳಿಸುವುದು.**

**ಕರ್ನಾಟಕದ ಪ್ರಮುಖ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದ ವಿಸ್ತೀರ್ಣ, ಉತ್ಪಾದನೆ, ಮಾರುಕಟ್ಟೆ ಮತ್ತು ಆರ್ಥಿಕದಾಯಕತೆಗಳ ವಸ್ತುಸ್ಥಿತಿ ವರದಿ (Perspective Report) ಹಾಗೂ ಬೆಲೆ ಮುನ್ಸೂಚನೆ (Forecasting) - ಡಿಸೆಂಬರ್ 2016**

**ಸರ್ಕಾರದ ಮಧ್ಯಪ್ರವೇಶ:**

**ಭತ್ತ:**

- ದೀರ್ಘಾವಧಿಯಲ್ಲಿ **ಮಳೆ ಆಶ್ರಯದ ಭತ್ತದ ಉತ್ಪಾದನೆ ಸದೃಢೀಕರಣ ಹಾಗೂ ಧಾರಣೆ ಸ್ಥಿರೀಕರಣಕ್ಕೆ** ಸಮಗ್ರ ಯಾಂತ್ರೀಕರಣವೂ ಸೇರಿದಂತೆ ಹಲವಾರು ಪ್ರಸ್ತಾವನೆಗಳನ್ನು ಬೆಲೆ ಆಯೋಗವು ದಿನಾಂಕ 05.05.2016 ರಂದು ಸರ್ಕಾರಕ್ಕೆ ಸಲ್ಲಿಸಿರುತ್ತದೆ.

- **ಇದರ ಅನುಗುಣವಾಗಿ, ಕೇರಳ ಮಾದರಿಯಲ್ಲಿ ಸಮಗ್ರ ಯಾಂತ್ರೀಕರಣಗೊಳಿಸುವ ಸಲುವಾಗಿ ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯದಿಂದ 10 ಜನ ವಿಜ್ಞಾನಿಗಳನ್ನು ತರಬೇತಿಗಾಗಿ ಕಳುಹಿಸುವಂತೆ ಸೂಚಿಸಿರುವ ದಿನಾಂಕ 23.08.2016 ರ ಸರ್ಕಾರಿ ಆದೇಶ ಫಲಪ್ರದವಾಗಬೇಕು.**

**ರಾಗಿ:**

- ಅನ್ನಭಾಗ್ಯ ಯೋಜನೆಗೆ ಕಳೆದ ಸಾಲುಗಳಂತೆ ಅಧಿಕ ಪ್ರೋತ್ಸಾಹ ಬೆಲೆ ನೀಡಿ ಖರೀದಿಸಬೇಕಾಗಬಹುದು.

- **ಕೇಂದ್ರ ಸರ್ಕಾರ ಘೋಷಿಸಿರುವ ಬೆಂಬಲ ಬೆಲೆ ನಮ್ಮ ರೈತರು ಭರಿಸಿದ ವೆಚ್ಚಕ್ಕಿಂತ ಶೇ.34 ರಷ್ಟು ಕಡಿಮೆಯಿರುವುದರಿಂದ ಉತ್ಪಾದಕತೆ ಹೆಚ್ಚಿಸಿ ಉತ್ಪಾದನಾ ವೆಚ್ಚ ಇಳಿಸುವತ್ತ ಕ್ರಮ ಅಗತ್ಯ.**

**ಜೋಳ:**

- ಬೆಂಬಲ ಬೆಲೆಯಲ್ಲಿ ಖರೀದಿಸಿ ಅನ್ನಭಾಗ್ಯದಡಿ ವಿತರಣೆ ಮಾಡುವುದು ಅತ್ಯಂತ ಸೂಕ್ತ.

- **ಈ ಹಿನ್ನೆಲೆಯಲ್ಲಿ ಜೋಳವನ್ನು ಹೈಬ್ರಿಡ್ ಹಾಗೂ ಮಾಲ್ದಂಡಿ ತಳಿಗಳೆಂದು ವಿಂಗಡಿಸದೇ ಲಭ್ಯವಿರುವ ಎಲ್ಲಾ ವಿಧದ ಜೋಳವನ್ನು ಪ್ರೋತ್ಸಾಹ ಬೆಲೆ ನೀಡಿ ಖರೀದಿಸುವುದು ಅತ್ಯಂತ ಸೂಕ್ತವಾಗಿದ್ದು, ಈ ನಿಟ್ಟಿನಲ್ಲಿ ಬೆಲೆ ಆಯೋಗ ಪ್ರಸ್ತಾವನೆ ಒಂದನ್ನು ಸಲ್ಲಿಸಿದ್ದು, ಸರ್ಕಾರದಿಂದ ಸಕಾರಾತ್ಮಕ ಪ್ರತಿಕ್ರಿಯೆ ಬಂದಿರುತ್ತದೆ.**

**ಮುಸುಕಿನ ಜೋಳ:**

- **ಸರ್ಕಾರದಿಂದ ನೇರ ಖರೀದಿ ಅಥವಾ ಸಂಗ್ರಹಣೆ, ಅಡಮಾನ ಸಾಲ ಒದಗಿಸುವುದು ಇತ್ಯಾದಿ ಸೌಲಭ್ಯಗಳನ್ನು ರೈತರಿಗೆ ಒದಗಿಸುವ ಮೂಲಕ ಬೆಂಬಲ ಬೆಲೆ ಖಾತ್ರಿಗೊಳಿಸಬೇಕು.**

**ಸಜ್ಜೆ:**

- ಕೇಂದ್ರ ಸರ್ಕಾರವು ಘೋಷಿಸಿರುವ ಬೆಂಬಲ ಬೆಲೆಯು ನಮ್ಮ ರೈತರು ಭರಿಸಿದ ವೆಚ್ಚಕ್ಕಿಂತ ಶೇ. 50ರಷ್ಟು ಕಡಿಮೆಯಿರುವುದರಿಂದ, ಉತ್ಪಾದಕತೆಯ ಹೆಚ್ಚಳ ಮತ್ತು ವೆಚ್ಚ ಇಳಿಕೆಗಳತ್ತ ಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ.

**ಕಡಲೆ:**

- ಪಡಿತರದಲ್ಲಿ ಹಂಚಲು ತೀರ್ಮಾನಿಸಿದರೆ, ಮಾರುಕಟ್ಟೆ ದರದಲ್ಲಿ ರೈತರಿಂದ ಖರೀದಿಸುವುದು ಸೂಕ್ತ.

**ತೊಗರಿ:**

- ತೊಗರಿಯಲ್ಲಿ ಮಾರುಕಟ್ಟೆ ಅಸ್ಥಿರತೆ ಈಗಾಗಲೇ ಪ್ರಾರಂಭವಾಗಿದ್ದು, ಪ್ರಮುಖ ಮಾರುಕಟ್ಟೆಗಳಲ್ಲಿನ ಧಾರಣೆಯು ಬೆಂಬಲ ಬೆಲೆಗಿಂತ ಕಡಿಮೆ ಮಟ್ಟಕ್ಕೆ ಬಂದಿರುವುದು ವರದಿಯಾಗಿರುತ್ತದೆ.

- **ಅಂತರಾಷ್ಟ್ರೀಯ ದ್ವಿದಳಧಾನ್ಯ ವರ್ಷಾಚರಣೆಯ** ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಬೆಲೆ ಆಯೋಗದ ಪ್ರಸ್ತಾವನೆಯನ್ನು ಪರಿಗಣಿಸಿ ಈ ಸಾಲಿನಲ್ಲಿ ತೊಗರಿ ಸೇರಿ ಇತರೆ ದ್ವಿದಳಧಾನ್ಯಗಳನ್ನು ಖರೀದಿಸಿ, ಪಡಿತರದಲ್ಲಿ ಕುಟುಂಬ ಒಂದಕ್ಕೆ ತಿಂಗಳಿಗೆ ಒಂದು ಕೆ.ಜಿ. ವಿತರಿಸಲು ಮುಂದಾಗಿರುವುದು ಅತ್ಯಂತ ಸ್ವಾಗತಾರ್ಹ.

- **ಈ ರೀತಿ ಪಡಿತರದಲ್ಲಿ ಹಂಚಿಕೆ ಮಾಡಲು ಒಟ್ಟು ಉತ್ಪಾದನಾ ವೆಚ್ಚ (Cost $C_3$) ವನ್ನು ಪರಿಗಣಿಸಿ, ತಕ್ಷಣ ರೈತರಿಂದ ಖರೀದಿ ಮಾಡತಕ್ಕದ್ದು.**

- ದೀರ್ಘಾವಧಿಯಲ್ಲಿ ತೊಗರಿ ಸೇರಿ ಇತರೆ ದ್ವಿದಳ ಧಾನ್ಯಗಳ ಉತ್ಪಾದನೆ ಮತ್ತು ಮಾರುಕಟ್ಟೆ ಸದೃಢಗೊಳಿಸಲು ಕೃಷಿ ಬೆಲೆ ಆಯೋಗ ಈಗಾಗಲೇ ಪ್ರಸ್ತಾಪಿಸಿರುವಂತೆ **"ದ್ವಿದಳಧಾನ್ಯ ಉತ್ಪಾದಕ ಸಂಘಟನೆಗಳ ಮಹಾಮಂಡಳ"** ರಚಿಸುವುದು ಅತ್ಯಂತ ಸೂಕ್ತವಾಗಿರುತ್ತದೆ.

**ಉದ್ದು ಮತ್ತು ಹೆಸರು:**

- ಅಧಿಕ ಆವಕದ ಅವಧಿ ಈಗಾಗಲೇ ಮುಗಿದಿದ್ದು, **ಪಡಿತರದಲ್ಲಿ ಹಂಚಲು ತೀರ್ಮಾನಿಸಿದರೆ ಮಾರುಕಟ್ಟೆ ದರದಲ್ಲಿ ರೈತರಿಂದ ಖರೀದಿಸುವುದು ಸೂಕ್ತ.**

**ಶೇಂಗಾ, ಸೋಯಾಅವರೆ ಮತ್ತು ಸೂರ್ಯಕಾಂತಿ:**

- **ಬೆಲೆ ಸ್ಥಿರೀಕರಣಕ್ಕೆ ಬೆಂಬಲ ಬೆಲೆಯಲ್ಲಿ ಖರೀದಿ ಅತ್ಯಗತ್ಯ.**

**ಹತ್ತಿ:**

- ಕೇಂದ್ರದ ಬೆಂಬಲ ಬೆಲೆ ನಮ್ಮ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆಯಿರುವುದರಿಂದ **ಉತ್ಪಾದಕತೆ ಹೆಚ್ಚಿಸಿ, ವೆಚ್ಚ ಇಳಿಸುವುದು ಅಗತ್ಯ.**

**ಟೊಮೆಟೊ:**

- **ಮಾರುಕಟ್ಟೆ ಮಧ್ಯಪ್ರವೇಶ ಯೋಜನೆ** *(Market Intervention Scheme)*ಯ ಮೂಲಕ ಖರೀದಿಸುವುದು ಅಥವಾ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಬೆಲೆಗಳ ನಡುವಿನ **ವ್ಯತ್ಯಾಸವನ್ನು ರೈತರಿಗೆ ವರ್ಗಾಯಿಸುವ** *(Price Compensation)* ಪದ್ಧತಿಯತ್ತ ಈಗ ಗಮನ ಹರಿಸುವುದು ಅಗತ್ಯ.

**ಈರುಳ್ಳಿ:**

- **ಖರೀದಿಸಿದ ಈರುಳ್ಳಿ ಹಾಗೂ ಟೊಮೆಟೊ ಉತ್ಪನ್ನಗಳನ್ನು ಮತ್ತೆ ನೇರವಾಗಿ ಮಾರುಕಟ್ಟೆಯಲ್ಲಿ ಹರಾಜಿಗೆ ತರದೇ, ಅವುಗಳನ್ನು ಸಂಸ್ಕರಿಸಿ, ಮೌಲ್ಯವರ್ಧನೆ ಮಾಡಿ ಶಾಲಾ ಮಕ್ಕಳ ಮಧ್ಯಾಹ್ನದ ಊಟ, ವಿದ್ಯಾರ್ಥಿನಿಲಯ ಇತ್ಯಾದಿ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳಲ್ಲಿ ಬಳಸುವುದು ಅತ್ಯಂತ ಸೂಕ್ತ.**

- **ಮಾರುಕಟ್ಟೆ ಮಧ್ಯಪ್ರವೇಶ ಯೋಜನೆ** (Market Intervention Scheme) ಯ ಮೂಲಕ ಖರೀದಿ ಅಥವಾ ಉತ್ಪಾದನಾ ವೆಚ್ಚ ಮತ್ತು ಮಾರುಕಟ್ಟೆ ಬೆಲೆಗಳ ನಡುವಿನ **ವ್ಯತ್ಯಾಸವನ್ನು ರೈತರಿಗೆ ವರ್ಗಾಯಿಸುವ** (Price Compensation) ಪದ್ಧತಿಯತ್ತ ಸಹ ಈಗ ಗಮನ ಹರಿಸುವುದು ಸೂಕ್ತವಾಗಿದೆ.

- ದೀರ್ಘಾವಧಿಯಲ್ಲಿ **ಈರುಳ್ಳಿ ಧಾರಣೆ ಸ್ಥಿರೀಕರಣ ಮತ್ತು ಮಾರುಕಟ್ಟೆ ಸದೃಢೀಕರಣಕ್ಕೆ** ಕೃಷಿ ಬೆಲೆ ಆಯೋಗ ದಿನಾಂಕ 01.09.2016 ರಂದು 5 ಅಂಶಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಈ ನಿಟ್ಟಿನಲ್ಲಿ ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾನಿಲಯದ ಸಂಶೋಧನಾ ನಿರ್ದೇಶಕರ ನೇತೃತ್ವದ **ತಜ್ಞರ ಸಮಿತಿಯು ವರದಿ** ಒಂದನ್ನು ಸಲ್ಲಿಸಿದ್ದು, ಇದರ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುವುದು ಸೂಕ್ತವಾಗಿದೆ.

**ಆಲೂಗಡ್ಡೆ:**

- ಧಾರಣೆ ಸ್ಥಿರೀಕರಣಕ್ಕೆ ಮಾರುಕಟ್ಟೆ ಮಧ್ಯಪ್ರವೇಶ ಹಾಗೇ, ಉತ್ಪಾದಕತೆ ಹೆಚ್ಚಿಸಿ, ವೆಚ್ಚ ಇಳಿಸುವ ಬಗ್ಗೆ ಕ್ರಮ ಅತ್ಯಗತ್ಯ.

**ಹಣ್ಣಿನ ಬೆಳೆಗಳು:**

- ಮಾರುಕಟ್ಟೆ ಮಧ್ಯಪ್ರವೇಶ ಅಗತ್ಯವಿಲ್ಲ.
- ಕೇಂದ್ರದ **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ** (RKVY) ಯಡಿಯಲ್ಲಿ ಬಾಳೆಗೆ **ನಿಖರ ಬೇಸಾಯ** *(Precision Farming)* ತಂತ್ರಜ್ಞಾನವನ್ನು ರಾಜ್ಯದ ಎಲ್ಲಾ ಜಿಲ್ಲೆಗಳ ರೈತರಿಗೂ ತಲುಪಿಸುವ ಯೋಜನೆಯನ್ನು ತೋಟಗಾರಿಕೆ ಇಲಾಖೆ ರೂಪಿಸಿದ್ದು, ಉತ್ಪಾದಕತೆ ಹೆಚ್ಚಳಕ್ಕೆ ಸಹಾಯವಾಗಲಿದೆ.
- ದ್ರಾಕ್ಷಿಗೆ ಸಂಬಂಧಿಸಿದಂತೆ, ಪ್ರತ್ಯೇಕ **ವೈನ್ ನೀತಿ** *(Wine Policy)* ಹಾಗೂ **ವೈನ್ ಮಂಡಳಿ** ರಚಿಸಿದ್ದು, ಇವು ಪರಿಣಾಮಕಾರಿಯಾಗಬೇಕಾಗಿದೆ.

- **ತೋಟಗಾರಿಕೆ ಬೆಳೆಗಳ ರೈತರ ಸಾಂಘಿಕ ಶಕ್ತಿ ಹೆಚ್ಚಿಸಿ, ಉತ್ತಮ ಮಾರುಕಟ್ಟೆ, ಯೋಗ್ಯ ಬೆಲೆ ದೊರಕಿಸಲು ಇಲಾಖೆ ರೈತರ ಉತ್ಪಾದಕ ಸಂಘಟನೆಗಳನ್ನು ರಚಿಸಿ, ಖಾಸಗಿ ಸಹಭಾಗಿತ್ವದ ಸಮಗ್ರ ಅಭಿವೃದ್ಧಿ (PPP-IHT) ಯೋಜನೆ ರೂಪಿಸಿರುತ್ತದೆ. ಇದು ಯಶಸ್ವಿಯಾದರೆ ರೈತರಿಗೆ ಅಪಾರ ಅನುಕೂಲ ಸಿಗಲಿದೆ.**

- ಈ ನಿಟ್ಟಿನಲ್ಲಿ ದೇಶದಲ್ಲೇ ಮೊದಲ ಬಾರಿಗೆ ತೋಟಗಾರಿಕಾ ಬೆಳೆಗಳ ಮಾರುಕಟ್ಟೆಗೆ ಸಹಕಾರಿ ವ್ಯವಸ್ಥೆ- **ಹಾಪ್‌ಕಾಮ್** (HOPCOM) ರಾಜ್ಯದಲ್ಲಿದ್ದರೂ, ಅದು ವೃತ್ತಿನಿರತೆ ಮತ್ತು ಸಾಮರ್ಥ್ಯವಿಲ್ಲದೇ ಪರಿಣಾಮಕಾರಿಯಾಗಿಲ್ಲ. ಈ ನಿಟ್ಟಿನಲ್ಲಿ ಬೆಲೆ ಆಯೋಗ ಸರ್ಕಾರಕ್ಕೆ ಪತ್ರ ಹಾಕಿದ್ದು, ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.

**ತೆಂಗು:**

- **ಖರೀದಿಸಿದ ಉತ್ಪನ್ನವನ್ನು ಮತ್ತೆ ನೇರವಾಗಿ ಮಾರುಕಟ್ಟೆಯಲ್ಲಿ ಹರಾಜಿಗೆ ತರದೇ, ಅದನ್ನು ಸಂಸ್ಕರಿಸಿ, ಮೌಲ್ಯವರ್ಧನೆ ಮಾಡಿ ಶಾಲಾ ಮಕ್ಕಳ ಮಧ್ಯಾಹ್ನದ ಊಟ, ವಿದ್ಯಾರ್ಥಿನಿಲಯ ಇತ್ಯಾದಿ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳಲ್ಲಿ ಬಳಸುವುದು ಅತ್ಯಂತ ಸೂಕ್ತ.**

- ದೀರ್ಘಾವಧಿಯಲ್ಲಿ, **ತೆಂಗಿನ ಉತ್ಪನ್ನಗಳ ಧಾರಣೆ ಸ್ಥಿರೀಕರಣ ಮತ್ತು ಮಾರುಕಟ್ಟೆ ಸದೃಢೀಕರಣಕ್ಕೆ** ಬೆಲೆ ಆಯೋಗವು ಹಲವು ಶಿಫಾರಸ್ಸುಗಳನ್ನು ಈಗಾಗಲೇ ಮಾಡಿದ್ದು, ಇವುಗಳನ್ನು ಸಮರ್ಥ ರೀತಿಯಲ್ಲಿ ಅನುಷ್ಠಾನಗೊಳಿಸುವುದು ಅತ್ಯಗತ್ಯವಾಗಿದೆ.

**ಅಡಕೆ:**

- ದೀರ್ಘಾವಧಿಯಲ್ಲಿ ಮಾರುಕಟ್ಟೆಯನ್ನು ಸದೃಢಗೊಳಿಸಲು **ಅಡಕೆಗೆ ಪ್ರತ್ಯೇಕ ಮಂಡಳಿ**ಯನ್ನು ಬೆಲೆ ಆಯೋಗವು ಶಿಫಾರಸ್ಸು ಮಾಡಿದ್ದು, ಈ ಬಗ್ಗೆ ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾನಿಲಯದ **ಉಪಕುಲಪತಿಗಳ ನೇತೃತ್ವದ ತಜ್ಞರ ಸಮಿತಿಯು ವರದಿಯನ್ನು** ಸರ್ಕಾರಕ್ಕೆ ಈಗಾಗಲೇ ಸಲ್ಲಿಸಿರುತ್ತದೆ. ಈ ನಿಟ್ಟಿನಲ್ಲಿ ಸೂಕ್ತ ರೀತಿಯಲ್ಲಿ ಕೇಂದ್ರಕ್ಕೆ ತಕ್ಷಣ ಪ್ರಸ್ತಾವನೆ ಸಲ್ಲಿಸುವುದು.

**ಸಾಂಬಾರು ಬೆಳೆಗಳು:**

- ಬೆಲೆ ವಿಚಾರದಲ್ಲಿ ಸರ್ಕಾರದ ಮಧ್ಯಪ್ರವೇಶ ಅನಗತ್ಯ.
- ಶುಂಠಿ, ಅರಿಶಿಣ, ಕಾಳುಮೆಣಸು ಇತ್ಯಾದಿ ಸಾಂಬಾರು ಬೆಳೆಗಳ ಉತ್ಪಾದನೆ ಹೆಚ್ಚಿಸಿ, ಮೌಲ್ಯವರ್ಧನೆ ಉತ್ತಮ ಮಾರುಕಟ್ಟೆ ಹಾಗೂ ಬೆಲೆ ಒದಗಿಸಲು ಕರ್ನಾಟಕ ರಾಜ್ಯಕ್ಕೆ ಹುಬ್ಬಳ್ಳಿಯು ಕೇಂದ್ರವಾಗಿರುವಂತೆ **ಪ್ರತ್ಯೇಕ ಸಾಂಬಾರು ಮಂಡಳಿಯನ್ನು** ರಚಿಸಲಾಗಿರುತ್ತದೆ. ಇದನ್ನು ಸದೃಢಗೊಳಿಸುವುದು ಸೂಕ್ತ.

# ಕರ್ನಾಟಕದ ಕೃಷಿ ಪರಿವರ್ತನೆಯ ದಿಕ್ಕು ಮತ್ತು ಮಾರ್ಗೋಪಾಯಗಳು

## – ರಾಜ್ಯದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ವಿಸ್ತೀರ್ಣದಲ್ಲಿ ದಶಕ (2005-06 ರಿಂದ 2014-15) ದಲ್ಲಾದ ಪರಿವರ್ತನೆಯ ಸಮಗ್ರ ವಿಶ್ಲೇಷಣೆ

## – ಜುಲೈ 2016

**ಮಾರ್ಗೋಪಾಯಗಳು**

ದಶಕದ ಅವಧಿಯಲ್ಲಿ ಕರ್ನಾಟಕದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ವಿಸ್ತೀರ್ಣದಲ್ಲಾದ ಪರಿವರ್ತನೆ, ಆ ಮೂಲಕ ಉತ್ಪಾದನೆಯ ಮೇಲಾಗುತ್ತಿರುವ ಪರಿಣಾಮಗಳನ್ನು ಅಭ್ಯೈಸಿಕೊಂಡು ಸಮರ್ಥವಾಗಿ ಪರಿಹಾರ ರೂಪಿಸಬೇಕಾಗಿದೆ.

**ಅ. ಸಮಗ್ರ ಉತ್ಪಾದನಾ ನೀತಿ:**

ನಮ್ಮ ವಿವಿಧ ಕೃಷಿ ಮತ್ತು ತೋಟಗಾರಿಕೆ ಬೆಳೆಗಳು ಎಷ್ಟು ಪ್ರಮಾಣದಲ್ಲಿ ಅಗತ್ಯವಿದೆ ಎಂದು ಅಂದಾಜು ಮಾಡಬೇಕಾಗಿದೆ. ಇದನ್ನು ಆಹಾರ ಭದ್ರತೆಯ ಅಗತ್ಯ, ಸ್ಥಳೀಯ ಬೇಡಿಕೆಗಳು, ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳ ಪೂರೈಕೆ, ವಿದೇಶಗಳಿಗೆ ರಫ್ತು ಹೀಗೆ ವಿವಿಧ ಮೂಲಗಳಿಂದ ಲೆಕ್ಕಾಚಾರ ಹಾಕಬೇಕಾಗಿದೆ. ಹಾಗೇ, ದೇಶ-ವಿದೇಶಗಳ ಉತ್ಪಾದನೆ, ಪೂರೈಕೆ ಬೇಡಿಕೆಗಳನ್ನು ಗಮನಿಸಬೇಕಾಗಿದೆ. ಇದಕ್ಕೆ ಮೊಟ್ಟ ಮೊದಲಾಗಬೇಕಾಗಿರುವುದು ರಾಜ್ಯ ಮಟ್ಟದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಸಮಗ್ರ ಉತ್ಪಾದನಾ ನೀತಿ.

**ಆ. ವಿಕೇಂದ್ರೀಕೃತ ಬೆಳೆ ಯೋಜನೆ:**

ಜಾಗತಿಕ ಮಾರುಕಟ್ಟೆ ಪ್ರಭಾವ ಅತಿಯಾಗಿರುವ ಮುಸುಕಿನ ಜೋಳ, ಕಬ್ಬು, ಹತ್ತಿಯಂತಹ ವಾಣಿಜ್ಯ ಬೆಳೆಗಳ ಹಾಗೂ ಅಡಕೆಯಂತಹ ತೋಟದ ಬೆಳೆಗಳ ವಿಸ್ತೀರ್ಣ ರಾಜ್ಯದಲ್ಲಿ ಅತಿಯಾಗಿ ಏರುತ್ತಿದೆ. ಆದರೆ ಆಹಾರ ಮತ್ತು ಮೇವಿಗೆ ಅತ್ಯಗತ್ಯವಾಗಿರುವ ರಾಗಿ, ಜೋಳ, ದ್ವಿದಳಧಾನ್ಯ ಮಳೆ ಆಶ್ರಯದ ಭತ್ತ ಇತ್ಯಾದಿಗಳ ಕೃಷಿಯನ್ನೇ ರೈತರು ಕೈಬಿಡುವಂತಾಗಿರುವರು.

ಈ ಪ್ರವೃತ್ತಿಗೆ ಕಡಿವಾಣ ಹಾಕಿ, ಆಹಾರ ಭದ್ರತೆ ಅಗತ್ಯ ಹವಾಮಾನ ವೈಪರಿತ್ಯ ಮಾರುಕಟ್ಟೆ, ವಾಣಿಜ್ಯ, ಕೈಗಾರಿಕೆಗಳ ಅಗತ್ಯ ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ರೈತಾಪಿ ವರ್ಗದ ಸಹಯೋಗದಲ್ಲೇ ಸೂಕ್ತ ಬೆಳೆ ಯೋಜನೆ *(Crop Planning)* ಯನ್ನು ಜಿಲ್ಲಾ, ವಲಯ ಮತ್ತು ರಾಜ್ಯ ಮಟ್ಟಗಳಲ್ಲಿ ರೂಪಿಸಿ, ಅನುಷ್ಠಾನಗೊಳಿಸಬೇಕಾಗಿದೆ.

- ಪ್ರೋತ್ಸಾಹಿಸುವ ಉದ್ದೇಶದಿಂದ **ಪ್ರತಿ ಜಿಲ್ಲೆಯ ಪ್ರಮುಖ ಬೆಳೆ** ಅಥವಾ ಬೆಳೆ ಪದ್ಧತಿಗಳನ್ನು ಗುರುತಿಸುವುದು. ಉದಾಹರಣೆಗೆ ತೃಣಧಾನ್ಯಕ್ಕೆ ಚಿತ್ರದುರ್ಗ ಮತ್ತು ಚಾಮರಾಜನಗರಗಳು, ಬ್ಯಾಡಗಿ ಒಣಮೆಣಸಿನಕಾಯಿಗೆ ಹಾವೇರಿ ಜಿಲ್ಲೆ, ತೊಗರಿಗೆ ಕಲಬುರಗಿ, ಸಾವಯವ ನಾಟಿ ತಳಿ ಭತ್ತಕ್ಕೆ ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳು, ಸಾವಯವ ಶುಂಠಿಗೆ ಬೀದರ್ ಜಿಲ್ಲೆ ಇತ್ಯಾದಿ.

- ಹಾಗೇ ಸರ್ಕಾರದ ಅನ್ನಭಾಗ್ಯ ಯೋಜನೆಗೆ ಅಗತ್ಯವಾದ ಬಿಳಿಜೋಳ, ರಾಗಿ ಹಾಗೇ, ತೊಗರಿ ಉತ್ಪಾದನೆ ಅಧಿಕ ಮಾಡಲು **ಪ್ರತ್ಯೇಕ ವಲಯಗಳನ್ನಾಗಿ** ರೂಪಿಸಿ ಪ್ರೋತ್ಸಾಹಿಸಬೇಕು.

- ಕರ್ನಾಟಕ ಸರ್ಕಾರ ರಾಜ್ಯದ 30 ಜಿಲ್ಲೆಗಳಿಗೆ ಪ್ರತ್ಯೇಕವಾದ **'ಸಮಗ್ರ ಜಿಲ್ಲಾ ಕೃಷಿ ಯೋಜನೆ'** (C-DAP) ಮತ್ತು ರಾಜ್ಯಕ್ಕೆ ಪ್ರತ್ಯೇಕ ಯೋಜನೆ (S-DAP) ಗಳನ್ನು ರೂಪಿಸುವ ಜವಾಬ್ದಾರಿಯನ್ನು **'ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್ ಅಡ್ವಾನ್ಸ್‌ಡ್‌ಲ್ಲಿಂಗ್'** ಎಂಬ ಸಂಸ್ಥೆಗೆ ವಹಿಸಿದ್ದು, ಈ ಸಂಸ್ಥೆ ವರದಿಯನ್ನು

ಈಗಾಗಲೇ ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಪ್ರತಿ ಜಿಲ್ಲೆಯಲ್ಲೂ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (CEO) ನೇತೃತ್ವದಲ್ಲಿ ರೈತರು, ತಜ್ಞರು, ಇಲಾಖಾಧಿಕಾರಿಗಳು ಮತ್ತಿತರರ ಸಮಿತಿ ರಚನೆಯಾಗಿ ಈ ಬಗ್ಗೆ ಚರ್ಚೆಯಾಗಿ ಸಹಮತ ರೂಪಿಸಬೇಕು.

- ಜಿಲ್ಲಾ ಮಟ್ಟದ ಬೆಳೆ ಯೋಜನೆಯ ಆಧಾರದ ಮೇಲೆ **ಕೃಷಿ ಪರಿಸರ ವಲಯ** *(Agro Ecological Zones)* ಮಟ್ಟದ ಬೆಳೆ ಪದ್ಧತಿ ರೂಪಿಸಿ, ರಾಜ್ಯದ ಅಗತ್ಯ, ಮಾರುಕಟ್ಟೆ ಪರಿಸ್ಥಿತಿ, ಹವಾಮಾನ ವೈಪರಿತ್ಯ *(Climate Change)* ಇತ್ಯಾದಿ ವಿಚಾರಗಳ ನಡುವೆ ಸಮನ್ವಯ ಸಾಧಿಸಿ, **ರಾಜ್ಯ ಮಟ್ಟದ ಸೂಕ್ತ ಬೆಳೆ ಮತ್ತು ಉತ್ಪಾದನೆ ಯೋಜನೆಯನ್ನು ರಚಿಸುವುದು**.

- ಈ ಉದ್ದೇಶಕ್ಕಾಗಿ ವಿವಿಧ ವಿಶ್ವವಿದ್ಯಾನಿಲಯಗಳು, **ರಾಷ್ಟ್ರೀಯ ಮಣ್ಣು ಸರ್ವೇಕ್ಷಣ ಮತ್ತು ಭೂ ನಿಯೋಜನ ಬಳಕೆ ಸಂಸ್ಥೆ** (NBSS & LUP) ಯಂತಹ ಸಂಶೋಧನಾ ಕೇಂದ್ರಗಳು, **ಕೃಷಿ ತಂತ್ರಜ್ಞರ ಸಂಸ್ಥೆ** (IAT) ಗಳಂತಹ ವೃತ್ತಿಪರ ಸಂಸ್ಥೆಗಳು, ಸ್ವಯಂಸೇವಾ ಸಂಸ್ಥೆಗಳ ಸಕ್ರಿಯ ಸಹಯೋಗ ಏರ್ಪಡಿಸುವುದು.

**ಇ. ಉತ್ಪಾದನೆ ನಿಗದಿ:**

ಮುಂದುವರೆದ ದೇಶಗಳಲ್ಲಿ ಕೃಷಿ ಉತ್ಪಾದನೆಯನ್ನು ಅಗತ್ಯಕ್ಕೆ ಅನುಗುಣವಾಗಿ ಮಿತಿಗೊಳಿಸುವ ಪರಿಪಾಠವಿರುತ್ತದೆ. ನಮ್ಮ ದೇಶದಲ್ಲೇ ತಂಬಾಕು ಮಂಡಳಿ ಬೇಡಿಕೆಗೆ ಅನುಗುಣವಾಗಿ ಉತ್ಪಾದನೆ ಗುರಿ ನಿರ್ಧರಿಸಿ, ತಂಬಾಕು ಬೆಳೆ ಬೆಳೆಯುವ ವಿಸ್ತೀರ್ಣವನ್ನು ನಿಗದಿಪಡಿಸುವುದು ಮಾತ್ರವಲ್ಲ ಕಟ್ಟುನಿಟ್ಟಾಗಿ ಕಾರ್ಯರೂಪಕ್ಕೂ ತರುತ್ತಿದೆ.

- **ಒಂದು ಸಾಲಿನಲ್ಲಿ ಧಾರಣೆ ಉತ್ತಮವಾದೊಡನೇ ರೈತರು ಆ ಬೆಳೆಯ ವಿಸ್ತೀರ್ಣವನ್ನು ಅತಿಯಾಗಿ ವಿಸ್ತರಿಸುವುದನ್ನು ನಿಯಂತ್ರಿಸುವುದು ಇಂದಿನ ತುರ್ತು ಅಗತ್ಯವಾಗಿದೆ.**

- ಹಾಗೇ, ಅಗತ್ಯವಿರುವ ಬೆಳೆಗಳನ್ನು ಎಲ್ಲಾ ಪ್ರೋತ್ಸಾಗಳೊಡನೆ ವಿಸ್ತರಿಸುವುದೂ ಸರ್ಕಾರದ ಜವಾಬ್ದಾರಿಯಾಗಿರುತ್ತದೆ.

- **ಸರ್ಕಾರದ ಹಿಡಿತದಲ್ಲಿರುವ ಪ್ರೋತ್ಸಾಹ, ರಿಯಾಯ್ತಿ, ಖರೀದಿ ಇತ್ಯಾದಿ ಕಾರ್ಯಕ್ರಮಗಳೆಲ್ಲವನ್ನೂ ಈ ಬೆಳೆ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಸೂಕ್ತ ಮತ್ತು ಸಮಯೋಜಿತ ರೀತಿಯಲ್ಲಿ ಬಳಸುವುದು.**

- ವಿವಿಧ ಬೆಳೆಗಳ ವಿಸ್ತೀರ್ಣ, ಉತ್ಪಾದನೆಗಳ ಬಗ್ಗೆ ನಿಖರವಾದ ಅಂಕಿ ಅಂಶಗಳು ಸಕಾಲದಲ್ಲಿ ದೊರೆಯುವಂತೆ ಮಾಡಲು **ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ** ಮತ್ತಷ್ಟು ಸದೃಢಗೊಳಿಸುವುದು.

- ಇದರ ಜೊತೆಗೆ ದೇಶ, ವಿದೇಶಗಳ ಉತ್ಪಾದನೆ, ಬೆಲೆ ಮುನ್ಸೂಚನೆ, ಮಾರುಕಟ್ಟೆ ಪರಿಸ್ಥಿತಿ ಇತ್ಯಾದಿ **ಮಾಹಿತಿಗಳನ್ನು ರೈತರಿಗೆ** ನಿರಂತರವಾಗಿ ದೊರಕಿಸುವ ವ್ಯವಸ್ಥೆ ರೂಪಿಸಿ ರಾಜ್ಯ/ಜಿಲ್ಲೆಗಳಿಗೆ ಸೂಕ್ತವಾದ ಬೆಳೆಗಳ ಕೃಷಿಯನ್ನು ಕೈಗೊಳ್ಳುವಂತೆ ಪ್ರೋತ್ಸಾಹಿಸುವುದು.

- ಈ ನಿಟ್ಟಿನಲ್ಲಿ ಕೃಷಿ ಬೆಲೆ ಆಯೋಗ 2015 ರ ಡಿಸೆಂಬರ್‌ನಲ್ಲಿ ಸಲ್ಲಿಸಿರುವ ವರದಿಯ ಕೆಳಗಿನ ಶಿಫಾರಸ್ಸು ಕಾರ್ಯರೂಪಕ್ಕೆ ತರುವುದು ಅಗತ್ಯವಾಗಿದೆ.

**ಈ. ಮಾರಾಟ ಮಾಹಿತಿ:**

- ಒಂದು ಬೆಳೆಯ ಕೃಷಿಗೆ ಸಂಬಂಧಿಸಿದ ಈ ಎಲ್ಲಾ ಮಾಹಿತಿಯನ್ನು ಸಕಾಲದಲ್ಲಿ ರೈತಾಪಿ ವರ್ಗಕ್ಕೆ ತಲುಪಿಸಲು ಗ್ರಾಮ ಪಂಚಾಯ್ತಿ ಮಟ್ಟದಲ್ಲಿ **ಬಿತ್ತರಿಸುವ ವ್ಯವಸ್ಥೆ** (KIOSKS) ಯನ್ನು ರಾಜ್ಯಾದ್ಯಂತ

ರೂಪಿಸಿ, ಸಮಗ್ರ ವಿದ್ಯುನ್ಮಾನ ಜಾಲ ಏರ್ಪಡಿಸುವುದು. ಈ ಕಾರ್ಯದಲ್ಲಿ ಗ್ರಾಮ ಪಂಚಾಯ್ತಿ ಅಥವಾ **ಕೆ.ಎಂ.ಎಫ್.ನ ಹಾಲು ಸಂಗ್ರಹಣಾ ಕೇಂದ್ರ**ಗಳನ್ನು ಬಳಸಿಕೊಳ್ಳುವುದು.

- **ರೈತರೊಡನೆ ನಿರಂತರ ಸಂಪರ್ಕ, ಸಂವಾದಕ್ಕಾಗಿ ಕೃಷಿ, ತೋಟಗಾರಿಕೆ, ರೇಷ್ಮೆ ಮತ್ತಿತರ ಇಲಾಖೆಗಳನ್ನು ಸೇರಿಸಿ ವಿದ್ಯುನ್ಮಾನ ಸಂವಾದ ಪೋರ್ಟಲ್** *(Interactive Portal)* **ಸಿದ್ಧಪಡಿಸಿ ರಾಜ್ಯಾದ್ಯಂತ ರೈತರು ದಿನನಿತ್ಯ ಅಗತ್ಯ ಮಾಹಿತಿಗಳನ್ನು ಕೇಳಿ ಪಡೆಯುವಂತಾಗಬೇಕು.**

- ಇವುಗಳ ಯಶಸ್ವಿ ಅನುಷ್ಠಾನಕ್ಕೆ ಮಾರಾಟ ಇಲಾಖೆ ವಿವಿಧ ವಿಶ್ವವಿದ್ಯಾನಿಲಯಗಳು, ಸಂಶೋಧನಾ ಸಂಸ್ಥೆಗಳು, ವೃತ್ತಿಪರರು, ಮಾಹಿತಿ ತಂತ್ರಜ್ಞಾನ ಪರಿಣಿತರ ಸಹಯೋಗದಲ್ಲಿ ಒಂದು ಸದೃಢ **ತಾಂತ್ರಿಕ ಘಟಕ** *(Technical Cell)* ಶೀಘ್ರ ನಿರ್ಮಿಸುವುದು.

**ಉ. ಸಾಂಸ್ಥಿಕ ರಚನೆ:**

ಹೀಗೆ, ಕರ್ನಾಟಕ್ಕೆ ಸಂಬಂಧಿಸಿದ ವಿವಿಧ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಉತ್ಪಾದನೆಗೆ ಸಂಬಂಧಿಸಿದ ಸಮಗ್ರ ನೀತಿಯನ್ನೂ ಅದಕ್ಕೆ ಪೂರಕವಾದ ವಿಕೇಂದ್ರೀಕೃತ ಬೆಳೆ ಯೋಜನೆಯನ್ನು ವಲಯ ಮತ್ತು ರಾಜ್ಯ ಮಟ್ಟದಲ್ಲಿ ಪ್ರತಿ ಸಾಲಿನಲ್ಲೂ ಮುಂಚಿತವಾಗಿ ಹೊರ ತರುವ ಸಾಂಸ್ಥಿಕ ರಚನೆ ಅತ್ಯಗತ್ಯವಾಗಿರುತ್ತದೆ.

- **ಇದರ ಜವಾಬ್ದಾರಿಯನ್ನು ಶಾಸನಬದ್ಧ ಸ್ಥಾನಮಾನ ಹೊಂದಿರುವ ರಾಜ್ಯ ಯೋಜನೆ ಮಂಡಳಿ** *(State Planning Board)* **ಹೊರುವುದು ಅತ್ಯಂತ ಸೂಕ್ತವಾಗಿರುತ್ತದೆ**.

- ಈ ನಿಟ್ಟಿನಲ್ಲಿ ರೈತ ಸಂಘಟನೆಗಳು, ಪ್ರಗತಿಪರ ರೈತರು, ಸ್ವಯಂ ಸೇವಾಸಂಸ್ಥೆಗಳು, ತಜ್ಞರು, ಮತ್ತಿತರೊಡನೆ ಸತತ ಮಾತುಕತೆ, ಸಂವಾದ, ಚರ್ಚೆಗಳನ್ನು ಏರ್ಪಡಿಸಿ ಸಹಮತ ರೂಪಿಸಬೇಕಾಗಿದೆ.

# ರಾಜ್ಯದ ಬೀಳು ಭೂಮಿ ಸದ್ಬಳಕೆ ಹಾಗೂ ಭೂ ಹಿಡುವಳಿ ಕ್ರೋಢೀಕರಣ

## ಅಧ್ಯಯನ, ಚರ್ಚೆ, ಸಂವಾದ ಹಾಗೂ ಅಭಿಪ್ರಾಯ ಆಧರಿತ ಶಿಫಾರಸ್ಸುಗಳು – ಮಾರ್ಚ್ 2017

**ಶಿಫಾರಸ್ಸುಗಳು:**

1. ಬೀಳು ಭೂಮಿ ಸದ್ಬಳಕೆಗೆ ಅರಣ್ಯ ಕೃಷಿ, ಬಿದಿರು ಕೃಷಿ, ಸೌರ ಶಕ್ತಿಯಂತಹ **ಪುನರ್ ಉತ್ಪಾದಿಸಲ್ಪಡುವ ಇಂಧನದ ಉತ್ಪಾದನೆ**, ಮೇವು ಅಭಿವೃದ್ಧಿ, ಕುರಿ ಸಾಕಾಣಿಕೆ ಇತ್ಯಾದಿ ಸುಸ್ಥಿರ ಅಭಿವೃದ್ಧಿಗೆ ಪೂರಕವಾದ ಉದ್ದಿಮೆಗಳನ್ನು ಪರಿಗಣಿಸಿ ತಂತ್ರಜ್ಞಾನ, ಹಣಕಾಸು, ಮಾರುಕಟ್ಟೆ ಇತರೆ ಸೌಲಭ್ಯ ರೈತರಿಗೆ ದೊರಕುವಂತಾಗಬೇಕು.

2. **ಗುತ್ತಿಗೆ ಕೃಷಿಯನ್ನು ಪ್ರೋತ್ಸಾಹಿಸುವುದಾದಲ್ಲಿ, ಅದನ್ನು ರೈತಾಪಿ ವರ್ಗಕ್ಕೆ, ಕೃಷಿ ಮತ್ತು ಸಂಬಂಧಿಸಿದ ಚಟುವಟಿಕೆಗಳಿಗೆ ಮಾತ್ರ ಸೀಮಿತಗೊಳಿಸಬೇಕು. ಜೊತೆಗೆ ಗುಂಪು ಕೃಷಿಗೆ ಹಾಗೂ ವಿಶೇಷವಾಗಿ ಕೇರಳದ 'ಕುಡುಂಬಶ್ರೀ' ಮಾದರಿಯಲ್ಲಿ ಮಹಿಳಾ ಗುಂಪುಗಳಿಗೆ ಈ ನಿಟ್ಟಿನಲ್ಲಿ ಆದ್ಯತೆ ನೀಡಿ ಪ್ರೋತ್ಸಾಹಿಸಬೇಕು.**

3. ಭೂ ಗುತ್ತಿಗೆ ಪಡೆದ ರೈತರ ಹಿಡುವಳಿ ಗಾತ್ರವು ಭೂ ಸುಧಾರಣೆ ಕಾಯ್ದೆಯ ಭೂ ಮಿತಿಯನ್ನು ಮೀರಬಾರದು. ಆದರೆ, ಗುಂಪು ಕೃಷಿಗೆ ಈ ಮಿತಿ ಅಳವಡಿಸಬಾರದು.

4. ಭೂ ಗುತ್ತಿಗೆಗೆ ಸಂಬಂಧಿಸಿದಂತೆ ಕಾಯ್ದೆಯನ್ನು ರೂಪಿಸುವಾಗ **ಭೂ ಮಾಲಿಕ ಹಾಗೂ ಗುತ್ತಿಗೆದಾರರಿಬ್ಬರ ಹಿತರಕ್ಷಣೆಯನ್ನೂ** ಮಾಡಬೇಕು. ಗುತ್ತಿಗೆಗೆ ಒಳಪಟ್ಟ ಭೂಮಿಯ ಲಾಭದಾಯಕತೆ ಅಧಿಕವಾಗಲು ಮತ್ತು ಫಲವತ್ತತೆ ಹಾಗೂ ಅಂತರ್ಜಲ ನಾಶವಾಗದಂತೆ ಕೂಡಾ ಮುಂಜಾಗರೂಕತೆ ವಹಿಸಬೇಕು.

5. ಈ ನಿಟ್ಟಿನಲ್ಲಿ **ಜಂಟಿ ಜವಾಬ್ದಾರಿ ರೈತ ಗುಂಪು** (Joint Liability Group) ಗಳನ್ನು ಪ್ರೋತ್ಸಾಹಿಸಿ ಸಾಲ, ವಿಮೆ, ಯಂತ್ರೋಪಕರಣಗಳ ಬಳಕೆ, ಪರಿಕರಗಳ ಸಮರ್ಪಕ ಪೂರೈಕೆ ಹಾಗೂ ಭೂಮಿ ಮತ್ತು ನೀರಿನ ಸಮರ್ಥ ಬಳಕೆ ಮಾಡಬೇಕು.

6. **ಗ್ರಾಮ ಪಂಚಾಯಿತಿಯು ಈ ರೀತಿಯ ಭೂ ಗುತ್ತಿಗೆ ಒಪ್ಪಂದವನ್ನು ಅನುಷ್ಠಾನಗೊಳಿಸಿ, ಮೇಲ್ವಿಚಾರಣೆ ನಡೆಸುವ ಅಧಿಕೃತ ಸಂಸ್ಥೆಯಾಗಿರಬೇಕು ಹಾಗೂ ಭೂ ಗುತ್ತಿಗೆಯಲ್ಲಿ ಉಂಟಾಗುವ ವ್ಯಾಜ್ಯಗಳು ಮತ್ತು ವಿವಾದಗಳನ್ನು ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಪರಿಹರಿಸಿಕೊಳ್ಳಲು ಶೀಘ್ರ ಅವಕಾಶಗಳಿರಬೇಕು.**

7. ಕೃಷಿ ಕೈಗೊಳ್ಳಲು ಅಸಮರ್ಥರಾದ ರೈತರು ತಮ್ಮ ಭೂಮಿಯನ್ನು ಗ್ರಾಮ ಪಂಚಾಯಿತಿಯಲ್ಲಿ **'ಠೇವಣಿ'** ಇಡುವ ಹಾಗೆ ವ್ಯವಸ್ಥೆ ಏರ್ಪಡಿಸಬೇಕು. ಈ ರೀತಿಯ ಏರ್ಪಾಟಿನಿಂದ, ಕ್ರೋಢೀಕರಿಸಿದ ಭೂ ಹಿಡುವಳಿಗಳನ್ನು ನಂತರ ಗುಂಪು ಅಥವಾ ವ್ಯಕ್ತಿಗಳ ಮಟ್ಟದಲ್ಲಿ ಗುತ್ತಿಗೆಗೆ ಕೊಡಲು, ಗ್ರಾಮ ಪಂಚಾಯಿತಿಗೆ ಸಾಧ್ಯವಾಗಲಿದೆ.

8. ಬೀಳು ಭೂಮಿಗೆ ಪರಿಹಾರವಾಗಿ **ಒಪ್ಪಂದ ಕೃಷಿ** (Contract Farming) ಯನ್ನು ಪರಿಗಣಿಸುವುದಾದಲ್ಲಿ, ರೈತರಿಗೆ ಲಾಭದಾಯಕ ಬೆಲೆಗಳನ್ನು ಖಾತ್ರಿಗೊಳಿಸಬೇಕು ಹಾಗೂ ಭೂ ಫಲವತ್ತತೆ, ಅಂತರ್ಜಲ ಹಾಳಾಗದಂತೆ ನಿಗಾ ವಹಿಸಬೇಕು. ಈ ನಿಟ್ಟಿನಲ್ಲಿ ರೈತರು ಹಾಗೂ ಕಂಪನಿಗಳ ಜೊತೆಗೆ **ಕೃಷಿ ಇಲಾಖೆ**ಯನ್ನು ಒಪ್ಪಂದದೊಳಗೆ ತರುವುದು ಅತ್ಯಂತ ಸೂಕ್ತವಾಗಿರುತ್ತದೆ.

**9. ತುಂಡು ಹಿಡುವಳಿ (Fragmentation) ಕ್ರೋಢೀಕರಣಕ್ಕೂ ಅಷ್ಟೇ ಗಮನ ನೀಡಿ, ಕಟ್ಟು ನಿಟ್ಟಿನ ಕ್ರಮಕೈಗೊಳ್ಳುವುದೂ ಈಗ ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ ಪಂಜಾಬ್ (1948), ಹಿಮಾಚಲ ಪ್ರದೇಶ (1971), ಒರಿಸ್ಸಾ (1972), ಉತ್ತರ ಪ್ರದೇಶ (2012), ಮಹಾರಾಷ್ಟ್ರ (2016) ರಾಜ್ಯಗಳು ಕಾಯ್ದೆ ಹಾಗೂ ಕಾನೂನುಗಳನ್ನು ರೂಪಿಸಿದ್ದು, ಇವುಗಳನ್ನು ಪರಿಶೀಲಿಸುವುದು ಸೂಕ್ತವಾಗಿದೆ.**

10. ರಾಜ್ಯದಲ್ಲಿ ಗೇಣಿ, ಲಾವಣಿ, ಉತ್ಪನ್ನ ಹಂಚಿಕೆ ಇತ್ಯಾದಿಗಳ ರೂಪದಲ್ಲಿ **ಅನಧಿಕೃತ ಗುತ್ತಿಗೆ ಕೃಷಿ** ಗಮನಾರ್ಹ ಪ್ರಮಾಣದಲ್ಲಿರುತ್ತದೆ. ಈ ನಿಟ್ಟಿನಲ್ಲಿ ಸಮಗ್ರ ಅಧ್ಯಯನ ಮತ್ತು ಸೂಕ್ತ ಕ್ರಮಗಳು ತುರ್ತು ಅಗತ್ಯವಾಗಿವೆ.

**11. ಈ ಮೇಲಿನ ಎಲ್ಲಾ ವಿಚಾರಗಳನ್ನು ಪರಿಗಣಿಸಿ "ಕರ್ನಾಟಕದ ಕೃಷಿ ಚೀಲು ಭೂಮಿಯ ಸದ್ಬಳಕೆ ಹಾಗೂ ಹಿಡುವಳಿ ಕ್ರೋಢೀಕರಣ"ಕ್ಕೆ ಸಮಗ್ರ ಕಾಯ್ದೆ ರೂಪಿಸಲು ರಾಜ್ಯ ಸರ್ಕಾರವು ಮುಂದಾಗಬೇಕಾಗಿದೆ.**

12. ಈ ನಿಟ್ಟಿನಲ್ಲಿ ಉತ್ತರ ಪ್ರದೇಶ, ಮಧ್ಯಪ್ರದೇಶ, ಕೇರಳ ಮತ್ತು ಆಂಧ್ರಪ್ರದೇಶ ರಾಜ್ಯಗಳು ಈಗಾಗಲೇ ರೂಪಿಸಿರುವ ಕಾಯ್ದೆ, ಕಾನೂನು ಮತ್ತು ಕಾರ್ಯಕ್ರಮಗಳನ್ನು ಪರಿಗಣಿಸುವುದು ಅತ್ಯಂತ ಸೂಕ್ತವಾಗಿರುತ್ತದೆ.

**13. ಈ ಬಗೆಗಿನ ಸಮಗ್ರ ಕಾಯ್ದೆ ರೂಪಿಸುವುದಕ್ಕಿಂತ ಮೊದಲು, ಸದನದ ಒಳಗೆ ಹಾಗೂ ಹೊರಗೆ ವಿವರವಾದ ಚರ್ಚೆ, ವಿಚಾರ ಮಂಥನ ಹಾಗೂ ಸಂವಾದಗಳು ನಡೆದು, ಈ ನಿಟ್ಟಿನಲ್ಲಿನ ಸಂಶಯಗಳನ್ನು ನಿವಾರಿಸಿಕೊಳ್ಳುವುದೂ ಅಷ್ಟೇ ಮುಖ್ಯವಾಗಿರುತ್ತದೆ.**

14. ಹಾಗೆಯೇ ಕರ್ನಾಟಕದ ಕೃಷಿ ಮತ್ತು ತೋಟಗಾರಿಕೆ **ಬೆಳೆಗಳ ವಿಸ್ತೀರ್ಣದಲ್ಲಾಗುತ್ತಿರುವ ತೀವ್ರ ಪರಿವರ್ತನೆ,** ಆ ಮೂಲಕ ಉತ್ಪಾದನೆಯ ಮೇಲಾಗುತ್ತಿರುವ ಪರಿಣಾಮಗಳನ್ನು ಅರ್ಥೈಸಿಕೊಂಡು ಸಮರ್ಥವಾಗಿ ಪರಿಹಾರ ರೂಪಿಸಬೇಕಾಗಿದೆ.

15. ಕರ್ನಾಟಕದ ವಿವಿಧ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದ **ಸಮಗ್ರ ಉತ್ಪಾದನಾ ನೀತಿಯನ್ನೂ** ಹಾಗೂ ಅದಕ್ಕೆ ಪೂರಕವಾದ ವಿಕೇಂದ್ರೀಕೃತ ಬೆಳೆ ಯೋಜನೆಯನ್ನೂ ಹೊರ ತರುವ **ಸಾಂಸ್ಥಿಕ ರಚನೆಯೂ** ಅತ್ಯಗತ್ಯವಾಗಿರುತ್ತದೆ.